**ಹಿರಿಯ ದಿವಾಣಿ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ, ಹೊನ್ನಾವರ**
**ಸಿ.ಸಿ ಸಂಖ್ಯೆ 216/2024**

ಫಿರ್ಯಾದಿಃ ಕೇಶವ ಶ್ರೀಧರ ನಾಯಕ
ವಯಸ್ಸು ಅ. 50 ವರ್ಷ
ಮಾಲೀಕರು ಶ್ರೀ ಸತ್ಯನಾರಾಯಣ ಕ್ಲಾಥ್ಸ್ ಮತ್ತು ಫ್ಯಾಶನ್ಸ್
ತೇಲಂಗ್ ಕಾಂಪ್ಲೆಕ್ಸ, ಹೊನ್ನಾವರ

**-ವಿರುದ್ಧ-**

ಆರೋಪಿ ಹುನುಮಂತ ಕೇಶವ ತಾಂಡೇಲ
ಅ. ಪ್ರಾಯ 45 ವರ್ಷ
ಉದ್ಯೋಗಃ ಮೀನು ವ್ಯಾಪಾರ
ಸಾಕೀನಃ ಕಾಸರಕೋಡ ಪೈಕಿ ಟೊಂಕಾ, ರಾಮನಗರ,
ತಾಲೂಕುಃ ಹೊನ್ನಾವರ

**ದಂಡ ಪ್ರಕ್ರಿಯಾ ಸಂಹಿತೆಯ ಕಲಂ 313 ಅಡಿಯಲ್ಲಿ ದಾಖಲು ಮಾಡಿಕೊಂಡ ಆರೋಪಿಯ ಹೇಳಿಕೆ**

ಪ್ರಶ್ನೆ 1: ನೀವು ಪಿರ್ಯಾದಿಯವರ ಪರವಾಗಿ ಪ್ರಾಸಾ-1 ರವರ ಹೇಳಿಕೆಯನ್ನು ಕೇಳಿದ್ದೀರಾ?
ಉತ್ತರಃ

ಪ್ರಶ್ನೆ2: ಪ್ರಾಸಾ-1 ರವರು ತಮ್ಮ ಸಾಕ್ಷ್ಯದಲ್ಲಿ, ನೀವು ಪಿರ್ಯಾದಿಯಿಂದ ದಿನಾಂಕ 08-06-2017 ರಂದು ಮೀನು ವ್ಯಾಪಾರದಲ್ಲಿ ಉಂಟಾದ ಜರೂರ ಕಷ್ಟ ಸಂಕಷ್ಟಗಳ ನಿವಾರಣೆಗೋಸ್ಕರ ರೂ.1,30,000/-ಗಳನ್ನು ಕೈಗಡ ಸಾಲವಾಗಿ ಪಡೆದುಕೊಂಡಿದ್ದು, ಸದರಿ ಹಣದ ತಿರುವಳಿಗೆ ಚೆಕ್ಕನ್ನು ನೀಡಿದ್ದು ಇದರ ಬಾಬ್ತು ಹೊನ್ನಾವರ ನ್ಯಾಯಾಲಯದಲ್ಲಿ ಸಿಸಿ 464/2017 ರಂತೆ ಪ್ರಕರಣ ದಾಖಲಿಸಿ ಪರಸ್ಪರ ರಾಜಿ ಮಾಡಿಕೊಂಡಿದ್ದು ರೂ.20,000-00 ಹಣವನ್ನು ನೀಡಿದ್ದು ಉಳಿದ ರೂ.1,10,000-00 ಹಣವನ್ನು ಪಿರ್ಯಾದಿಗೆ ಕೊಡಲು ಬಾಕಿ ಇರುವುದಾಗಿ ಸಾಕ್ಷಿ ನುಡಿಯುತ್ತಾರೆ. ಇದಕ್ಕೆ ನೀವೇನು ಹೇಳುವಿರಿ?
ಉತ್ತರಃ

ಪ್ರಶ್ನೆ3: ಪ್ರಾಸಾ-1 ರವರು ಮುಂದುವರಿದು, ದಿನಾಂಕಃ 02-04-2022 ರಂದು ಆರೋಪಿಯು ಪಿರ್ಯಾದಿಯನ್ನು ಭೇಟಿಯಾಗಿ ತನಗೆ ರೂ.1,10,000-00 ಸಾಲದ ಅವಶ್ಯಕತೆ ಇದ್ದು ಸಂಜೆಯೊಳಗೆ ಪಾವತಿಸುವುದಾಗಿ ಹೇಳಿ ಈ ಹಿಂದೆ ಕೊಡಬೇಕಾದ ರೂ.1,10,000-00 ನ್ನು

ಸೇರಿಸಿಕೊಡುವುದಾಗಿ ಹೇಳಿ ರೂ.1,15,000-00 ನ್ನು ಪಡೆದುಕೊಂಡಿದ್ದೀರಿ ಎಂಬುದಾಗಿ ಸಾಕ್ಷಿ ನುಡಿಯುತ್ತಾರೆ. ಇದಕ್ಕೆ ನೀವೇನು ಹೇಳುವಿರಿ?

ಉತ್ತರಃ

ಪ್ರಶ್ನೆ4: ಫ್ರಾಸಾ-1ರವರು ಮುಂದುವರಿದು, ತಾನು ಪಿರ್ಯಾದಿಗೆ ಕೊಡಬೇಕಾದ ರೂ.2,25,000-00 ಹಣವನ್ನು ಮರುಪಾವತಿ ಮಾಡಲು ತನ್ನ ಖಾತೆ ಹೊಂದಿರುವ ಅರ್ಬನ್ ಬ್ಯಾಂಕ್ ಹೊನ್ನಾವರ ಶಾಖೆಯ ಚೆಕ್ ನಂ.083178 ನಂಬರಿನ ಚೆಕ್ಕನ್ನು ದಿನಾಂಕ 02-04-2022 ರಂದು ಸಹಿ ಮಾಡಿ ತನಗೆ ನೀಡಿ ಸಾಲದ ಮೊಬಲಗನ್ನು ಪಡೆದುಕೊಳ್ಳುವಂತೆ ತಿಳಿಸಿ ಚೆಕ್ ನೀಡಿರುವುದಾಗಿ ಸಾಕ್ಷಿ ನುಡಿಯುತ್ತಾರೆ. ಇದಕ್ಕೆ ನೀವೇನು ಹೇಳುವಿರಿ?

ಉತ್ತರಃ

ಪ್ರಶ್ನೆ5: ಫ್ರಾಸಾ-1ರವರು ಮುಂದುವರಿದು, ತಾನು ಆರೋಪಿಯು ನೀಡಿದ ಚೆಕ್ಕನ್ನು ಪಿರ್ಯಾದಿಯು ದಿನಾಂಕ 04-03-2022ರಂದು ನಗದೀಕರಣಕ್ಕಾಗಿ ಅರ್ಬನ್ ಬ್ಯಾಂಕ್ ಹೊನ್ನಾವರ ಶಾಖೆಯಲ್ಲಿ ಹಾಜರುಪಡಿಸಿದಾಗ, ಸ್ಧ್ರಿ ಚೆಕ್ ನಗದೀಕರಣಗೊಳ್ಳದೇ “ಆರೋಪಿಯ ಖಾತೆಯಲ್ಲಿ ಸಾಕಷ್ಟು ಹಣವಿಲ್ಲ" ಎಂದು ಬ್ಯಾಂಕಿನ ಅಧಿಕಾರಿಗಳು ಹಿಂಬರಹವನ್ನು ನೀಡಿರುವುದಾಗಿ ಸಾಕ್ಷಿ ನುಡಿಯುತ್ತಾರೆ. ಇದಕ್ಕೆ ನೀವೇನು ಹೇಳುವಿರಿ?

ಉತ್ತರಃ

ಪ್ರಶ್ನೆ6: ಫ್ರಾಸಾ-1ರವರು ಮುಂದುವರಿದು, ನಂತರ ಆರೋಪಿಗೆ ತಾನು ತಮ್ಮ ವಕೀಲರ ಮೂಲಕ ದಿನಾಂಕಃ13-06-2022ರಂದು ಈ ಬಗ್ಗೆ ತಾನು ನೋಟಿಸ್ ಕಳುಹಿಸಿದ್ದು, ಸದರಿ ನೋಟೀಸು ಆರೋಪಿಯು ದಿನಾಂಕಃ 21-06-2022 ರಂದು ಸ್ವೀಕರಿಸಿದ್ದು, ಇದುವರೆಗೂ ಹಣ ಪಾವತಿ ಮಾಡಿಲ್ಲ ಎಂಬುದಾಗಿ ಸಾಕ್ಷಿ ನುಡಿಯುತ್ತಾರೆ. ಇದಕ್ಕೆ ನೀವೇನು ಹೇಳುವಿರಿ?

ಉತ್ತರಃ

ಪ್ರಶ್ನೆ7: ಫ್ರಾಸಾ-1ರವರು ಮುಂದುವರಿದು, ಆರೋಪಿಯು ಸದರಿ ಅವಧಿಯೊಳಗೆ ಹಣವನ್ನು ಮರು ಪಾವತಿಸದೇ ತನ್ನ ಖಾತೆಯಲ್ಲಿ ಹಣ ಇಲ್ಲದೇ ಇದ್ದರೂ ಸಹ ಉದ್ದೇಶಪೂರಕವಾಗಿ ತನಗೆ ವಂಚನೆ ಮಾಡುವ ಉದ್ದೇಶದಿಂದಲೇ ನಗದೀಕರಣವಾಗದ ಚೆಕ್ಕನ್ನು ನೀಡಿರುವುದಾಗಿ ಸಾಕ್ಷಿ ನುಡಿಯುತ್ತಾರೆ. ಇದಕ್ಕೆ ನೀವೇನು ಹೇಳುವಿರಿ?

ಉತ್ತರಃ

ಪ್ರಶ್ನೆ.8: ನಿಮಗೆ ಇನ್ನೇನಾದರೂ ಹೇಳುವುದು ಇದೆಯೇ?

**ಉತ್ತರಃ**

ಪ್ರಶ್ನೆಃ.9: ನಿಮ್ಮ ಪರವಾಗಿ ಯಾವುದಾದರೂ ಮೌಖಿಕ ಅಥವಾ ದಾಖಲಾತಿ ಸಾಕ್ಷ್ಯ ಇರುತ್ತದೆಯೇ?

**ಉತ್ತರಃ**

(ಮೇಲೆ ಹೇಳಿದ ಸಾಕ್ಷಿದಾರರು ನುಡಿದಿರುವ ಸಾಕ್ಷ್ಯವನ್ನು ಆರೋಪಿಗೆ ಓದಿ ಹೇಳಿದ್ದು, ಅವರು ನೀಡಿದ ಉತ್ತರವನ್ನು ನನ್ನ ಹಸ್ತಾಕ್ಷರಗಳಿಂದ ಬರೆದು ಕೊಳ್ಳಲಾಯಿತು ಅಂತಾ ಈ ಮೂಲಕ ದೃಡೀಕರಿಸುತ್ತೇನೆ.)

Sd/-

**ದಿನಾಂಕಃ 11-06-2025.**

**ಹಿರಿಯ ಶ್ರೇಣಿ ದಿವಾಣಿ ನ್ಯಾಯಾಧೀಶರು ಮತ್ತು**
**ಪ್ರ.ದ.ನ್ಯಾದಂಡಾಧಿಕಾರಿಗಳು, ಹೊನ್ನಾವರ.**